**ಮುಖ್ಯ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಯಾದಗಿರಿ.**

**ಸಿ.ಸಿ. ನಂ.233/2021**

ಸಿಡಬ್ಲ್ಯೂ ಃ **3**
ಪಿಡಬ್ಲ್ಯೂ ಃ **6**

<u>ದಿನಾಂಕಃ **12-12-2024**</u>

<u>ಸಾಕ್ಷಿಗೆ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು</u>

ಸಾಕ್ಷಿಯ ಹೆಸರು - ಲೋಹಿತ್

ತಂದೆಯ ಹೆಸರು - ದೇವನಂದ ಕೊಲಿ

ವಯಸ್ಸು -? **32** ವರ್ಷ

ಉದ್ಯೋಗ - ವ್ಯಪಾರ

ವಾಸಸ್ಥಳಃ - ಯಾದಗಿರಿ.

<u>ಮುಖ್ಯ ವಿಚಾರಣೆಃ ಹಿ.ಸ.ಸ.ಅಭಿಯೋಜಕರಿಂದಃ</u>

ಚಾಸಾ-2 ರವರ ಪರಿಚಯ ನನಗೆ ಇರುತ್ತದೆ. ಕಳೆದ 3-4 ವರ್ಷಗಳ ಹಿಂದೆ ಮೃತದೇಹವನ್ನು ಗುರುತಿಸಲು ಪೊಲೀಸರು ನನಗೆ ಪೋನ್ ಕರೆ ಮಾಡಿದ್ದರು ಆ ಪ್ರಕಾರ ನಾನು ರೈಲ್ವೆ ನಿಲ್ದಾಣದ ಬಳಿ ಹೋಗಿದ್ದೆ ನಂತರ ನಾನು ಸರಕಾರಿ ಆಸ್ಪತ್ರೆ ಯಾದಗಿರಿಗೆ ಹೋಗಿದ್ದೆ ಅಲ್ಲಿ ನಾನು ಮೃತದೇಹವನ್ನು ಗುರುತು ಹಿಡಿದಿದ್ದೆ, ಸದರಿ ಮೃತದೇಹವು ಇಂದಿರ್ ಸಿಂಗ್ ರವರದ್ದು ಇತ್ತು ಅವರು ನಮ್ಮ ಮನೆಯ ಪಕ್ಕದಲ್ಲಿ ಇದ್ದರು. ಇಂದಿರ್ ಸಿಂಗ್ ರವರು ಹೇಗೆ ಮೃತಪಟ್ಟಿದ್ದರು ಎಂದು ನನಗೆ ಗೊತ್ತಿರುವುದಿಲ್ಲ. ಸಾಕ್ಷಿಯು ತಾನು ಸಹಿ ಮಾಡಿದ ದಾಖಲೆಯನ್ನು ನೋಡಿ ಗುರುತಿಸಿದ್ದು ಸದರಿ ದಾಖಲೆಯು ಶವಾ ತನಿಖಾ ವರದಿಯಾಗಿದ್ದು ಅದನ್ನು ಈಗಾಗಲೇ ನಿಪಿ 2 ಎಂದು ಗುರುತಿಸಲಾಗಿರುತ್ತದೆ. ಅದರ ಮೇಲೆ ಇರುವ ಸಾಕ್ಷಿಯ ಸಹಿಯನ್ನು ನಿಪಿ 2(ಬಿ) ಎಂದು ಗುರುತಿಸಲಾಯಿತು. ನಾನು ಸಹಿ ಮಾಡುವಾಗ ಬೆಳಗ್ಗೆ 11 ರಿಂದ 11-30 ಗಂಟೆ ಆಗಿತ್ತು. ಸಾಕ್ಷಿಯು ಮೊದಲನೇಯ ಪೋಟೋದಲ್ಲಿ ತಾನು ಇರುವುದನ್ನು ನೋಡಿ ಗುರುತಿಸಿರುತ್ತಾರೆ ಸದರಿ ಪೋಟೋವನ್ನು ಈಗಾಗಲೇ ನಿಪಿ 3 ಎಂದು ಗುರುತಿಸಲಾಗಿರುತ್ತದೆ.

( ಈ ಹಂತದಲ್ಲಿ ಸಾಕ್ಷಿಯು ಭಾಗಶಃ ಪ್ರತಿಕೂಲಕರ ಸಾಕ್ಷ್ಯ ನುಡಿದ ಕಾರಣ ಪಾಟೀ ಸವಾಲು ಮಾಡಲು ಹಿರಿಯ ಸ.ಸ.ಅ ರವರು ಪಾಟೀ ಸವಾಲನ್ನು ಮಾಡಲು ಅನುಮತಿಯನ್ನು ಕೋರಿರುತ್ತಾರೆ ಅವರ ಕೋರಿಕೆಯ ಮೇರೇಗೆ ಅನುಮತಿಯನ್ನು ನೀಡಲಾಯಿತು.)

ಪಾಟೀ ಸವಾಲುಃ ಹಿರಿಯ ಸ.ಸ. ಅ ರವರಿಂದಃ

ದಿನಾಂಕಃ 08.02.2021 ರಂದು ಮದ್ಯಾಹ್ನ 12-15 ರಿಂದ 1-15 ಗಂಟೆಯ ವರೆಗೆ ನನ್ನ ಹಾಗೂ ಚಾಸಾ-2 ರವರ ಸಮಕ್ಷಮ ಪೊಲೀಸರು ನಿಪಿ 2 ರಂತೆ ಶವಾ ತನಿಖಾ ವರದಿಯನ್ನು ಮಾಡಿರುತ್ತಾರೆ ಎಂದರೆ ಸರಿ. ಇಂದಿರ್ ಸಿಂಗ್ ರವರಿಗೆ ರೈಲ್ವೆ ನಿಲ್ದಾಣದ ಬಳಿ ಒಂದು ಕಾರು ಅಪಘಾತ ಪಡಿಸಿತ್ತು ಎಂದರೆ ಸರಿ.

ಪಾಟೀ ಸವಾಲುಃ ಆರೋಪಿತರ ಪರ ವಕೀಲರಾದ ಶ್ರೀ.ಹೆಚ್.ಎಂ.ಪಿ ರವರಿಂದಃ

ನನಗೆ ಪೊಲೀಸರು ಪಂಚನಾಮೆ ಮಾಡಲು ಕರೆದಿದ್ದರು. ನಿಪಿ 2 ರಲ್ಲಿ ಬರೆದಿರುವ ವಿಷಯಗಳು ನನಗೆ ಗೊತ್ತಿರುವುದಿಲ್ಲ. ನಾನು ಹಾಗೂ ಚಾಸಾ-8 ರವರು ಆತ್ಮೀಯರು ಆಗಿರುತ್ತೇವೆ ಎಂದರೆ ಸರಿ. ನನ್ನ ಜೊತೆಗೆ ಚಾಸಾ-8 ರವರು ಇವತ್ತು ಬಂದಿರುತ್ತಾರೆ. ರೈಲು ನಿಲ್ದಾಣದ ಬಳಿ ಅಪಘಾತ ಆಗಿರುವ ಬಗ್ಗೆ ನನಗೆ ಗೊತ್ತಿರುವುದಿಲ್ಲ. ದಿನಾಂಕಃ 08.02.2021 ಮದ್ಯಾಹ್ನ 12-15 ಗಂಟೆಯಿಂದ 1-15 ಗಂಟೆಯ ವರೆಗೆ ನನ್ನ ಮತ್ತು ಚಾಸಾ-2 ರವರ ಸಮಕ್ಷಮ ನಿಪಿ 2 ರಂತೆ ಶವಾ ತನಿಖಾ ವರದಿಯನ್ನು ಮಾಡಿರುವುದಿಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚುಗಾರನಿಂದ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಅದೆ.

ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು,
ಯಾದಗಿರಿ.